ಅಧ್ಯಕ್ಷರ ಅಪ್ಪಣೆ ಮೇರೆಗೆ

ಪ್ರಶ್ನೋತ್ತರ ಪಟ್ಟಿಯನ್ನು ಸಕಾಲದಲ್ಲಿ ಸಭೆಯ ಮುಂದೆ ಮಂಡಿಸುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ನಿನ್ನೆ ಪಟ್ಟಿಯಲ್ಲಿದ್ದ ಪ್ರಶ್ನೆಗಳಿಗೆ ಮಂಡಿಸಲಾದ ಉತ್ತರವೇ ನಮಗೆ ಇನ್ನೂ ತಲುಪಿಲ್ಲ. ತಾವು ಇದರ ಬಗ್ಗೆ ಗಮನಹರಿಸಿ ನಮಗೆ ಉತ್ತರಗಳನ್ನು ಕೊಡಿಸಬೇಕು.

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೇ, ಇದರ ಬಗ್ಗೆ ಸ್ಟ್ರೀಮ್ ಲೈನ್ ಮಾಡಿ ಸರಿಯಾಗಿ ಉತ್ತರಗಳನ್ನು ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸರ್ಕಾರದಿಂದ ಉತ್ತರಗಳನ್ನು ವಿಧಾನ ಸಭಾ ಕಾರ್ಯಾಲಯಕ್ಕೆ ಕಳುಹಿಸಿರುತ್ತೇವೆ. ಅಲ್ಲಿಂದ ಮಾನ್ಯ ಸದಸ್ಯರುಗಳಿಗೆ ಉತ್ತರಗಳನ್ನು ತಾವು ಕಳುಹಿಸಿಕೊಡಬೇಕಾಗುತ್ತದೆ.

ಅಧ್ಯಕ್ಷರು : ನಮಗೆ ಉತ್ತರಗಳು ಬಂದಿಲ್ಲ. ನೀವು ನಮ್ಮ ಮೇಲೆ ಹೇಳಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ತಮಗೆ ಉತ್ತರಗಳು ಬಂದಿರದಿದ್ದಲ್ಲಿ ಅವುಗಳನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ನಾವು ಕೆಲವೊಂದು ಮಾಹಿತಿಗಳನ್ನು ನೇರವಾಗಿ ಇಲಾಖೆಗಳಿಂದ ಸಂಗ್ರಹ ಮಾಡಲಿಕ್ಕಾಗುವುದಿಲ್ಲ. ಅದಕ್ಕೋಸ್ಕರವಾಗಿ ನಾವು ಭಾಷಣಗಳನ್ನು ಮಾಡುವಾಗ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಲಿಖಿತ ಮೂಲಕ ಪ್ರಶ್ನೆಗಳನ್ನು ನಾವು ಕೇಳಿರುತ್ತೇವೆ. 'ಮಂಡಿಸಿದ್ದೇವೆ' ಎಂದು ಹೇಳಿ ಉತ್ತರಗಳನ್ನು ಕೊಡದಿದ್ದರೆ ಹೇಗೆ? ಮಾನ್ಯ ಸಚಿವರು ಕೇವಲ ಪ್ರಶ್ನೆಗಳ ಪಟ್ಟಿಯನ್ನು ಈ ಸಭೆಯ ಮುಂದೆ ಮಂಡಿಸಿದರೆ ಹೇಗೆ? ನಿನ್ನೆ ಮಂಡಿಸಿದ ಪಟ್ಟಿಯಲ್ಲಿನ ಉತ್ತರಗಳು ಇನ್ನೂ ಸಹ ನಮಗೆ ಬಂದಿಲ್ಲ. ಮಾನ್ಯ ಸಚಿವರು ಏನನ್ನು ಮಂಡಿಸಿದ್ದಾರೆ? ಈ ಸಭೆ ತಾಂತ್ರಿಕವಾಗಿ ನಡೆಯುತ್ತಿದೆಯೇ? ಇದಕ್ಕೆ ಏನಾದರೂ ಜೀವ ಇದೆಯೇ? ಮಾನ್ಯ ಅಧ್ಯಕ್ಷರು ಇದಕ್ಕೆಲ್ಲಾ ಅವಕಾಶ ಮಾಡಿಕೊಡಬಾರದು. ಉತ್ತರಗಳು ಬಾರದಿದ್ದಲ್ಲಿ ಅದನ್ನು ತಡೆ ಹಿಡಿಯಿರಿ.

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೇ, ಯಾವುದೇ ಒಂದು ಪ್ರಶ್ನೆಗಳ ಪಟ್ಟಿಗೆ ಉತ್ತರಗಳು ಬಾರದಿದ್ದಲ್ಲಿ ತಾವು ಅವುಗಳನ್ನು ಸದನದಲ್ಲಿ ಮಂಡಿಸಲೇ ಬೇಡಿ. ಮಾನ್ಯ ಸಿಂಧ್ಯಾರವರೇ, ಉತ್ತರಗಳು ಬಾರದಿದ್ದಲ್ಲಿ ಆ ಪ್ರಶ್ನೆಗಳ ಪಟ್ಟಿಯನ್ನು ತಡೆಹಿಡಿಯುತ್ತೇನೆ ಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಿದ ಮೇಲೆ ಇಲಾಖೆಗಳಿಂದ ಅವುಗಳಿಗೆ ಉತ್ತರಗಳನ್ನು ತಯಾರಿಸಿ ಸದನಕ್ಕೆ ಒದಗಿಸಬೇಕಾಗುತ್ತದೆ. ಎಲ್ಲೋ ತಾಂತ್ರಿಕವಾಗಿ ಸ್ವಲ್ಪ ತೊಂದರೆಗಳಾಗಿರಬಹುದು. ನಾವು ಉತ್ತರಗಳನ್ನು ವಿಧಾನಸಭಾ ಕಾರ್ಯಾಲಯಕ್ಕೆ ನೀಡುವಲ್ಲಿ ಲೇಟಾಗಿದೆಯೋ ಅಥವಾ [illegible] ಮುಂದಕ್ಕೆ ಮಾಡುವ ಪ್ರೋಸಸ್‌ನಲ್ಲಿ

ಲೇಟಾಗಿದೆಯೋ ಗೊತ್ತಿಲ್ಲ. ಮಾನ್ಯ ಸದಸ್ಯರುಗಳು ಹೇಳಿರುವ ಸಲಹೆಗಳನ್ನು ನಾನು ಯಥೋಚಿತವಾಗಿ ಒಪ್ಪಿಕೊಂಡಿದ್ದೇನೆ. ತಪ್ಪಾಗಿರುವ ಬಗ್ಗೆ ತಾವು ಹೇಳಿದ್ದೀರಿ. ಅದನ್ನು ಸರಿಪಡಿಸಿಕೊಳ್ಳುತ್ತೇವೆ ಎಂದು ನಾನು ಹೇಳುತ್ತಿದ್ದೇನೆ. ಹೊಸ ಸರ್ಕಾರ ಬಂದಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ಇದೆಲ್ಲವನ್ನೂ ನಾನು ಸ್ಟ್ರೀಮ್ ಲೈನ್ ಮಾಡುತ್ತೇನೆ.

ಅಧ್ಯಕ್ಷರು : ಮುಂದಿನ ತಿಂಗಳು 10ನೇ ತಾರೀಖಿನಿಂದ ಅಧಿವೇಶನ ಪುನಃ ಪ್ರಾರಂಭ ಆಗುತ್ತದೆ. ಆ ಹೊತ್ತಿಗಾದರೂ ಉತ್ತರಗಳು ಮಾನ್ಯ ಸದಸ್ಯರುಗಳಿಗೆ ಸರಿಯಾಗಿ ತಲುಪುವಂತಹ ವ್ಯವಸ್ಥೆಯನ್ನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮಾಡಲಿ.

ವಿತ್ತೀಯ ಕಾರ್ಯಕಲಾಪಗಳು

1999-2000ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತನ್ನು) ಸಭೆಯ ಮುಂದೆ ಮಂಡಿಸುವುದು

ಶ್ರೀ ಶಿವಣ್ಣ (ಹಣಕಾಸು ರಾಜ್ಯ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, 1999-2000ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತನ್ನು) ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1999-2000ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತನ್ನು) ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಶಿವಣ್ಣ (ಹಣಕಾಸು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, 1999-2000ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತನ್ನು) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

11.40 ಎ.ಎಂ

ಅಧ್ಯಕ್ಷರ ಅಪ್ಪಣೆ ಮೇರೆಗೆ

ಗ್ರಾಮಪಂಚಾಯಿತಿಗಳಲ್ಲಿ ಎಸ್.ಸಿ./ಎಸ್.ಟಿಗಳಿಗೆ ಮೀಸಲಾತಿ ನೀಡುವ ಕುರಿತು ಚರ್ಚೆ

ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುವುದಕ್ಕೆ ನಾನ[illegible]ಪಡುತ್ತೇನೆ. ಈಗಾಗಲೇ ಇಡೀ ರಾಜ್ಯದಲ್ಲಿ ಗ್ರಾಮ